ಎಚ್. ದಂಡಪ್ಪ

# ಹಲವು ಆಯಾಮಗಳ 'ಸಕೀನಾಳ ಮುತ್ತು'

'ಸಕೀನಾಳ ಮುತ್ತು' ವಿವೇಕ ಶಾನಭಾಗ ಅವರ ನಾಲ್ಕನೇ ಕಾದಂಬರಿ. 'ಇನ್ನೂ ಒಂದು', 'ಒಂದು ಬದಿ ಕಡಲು', 'ಊರು ಭಂಗ' ಅವರ ಹಿಂದಿನ ಕಾದಂಬರಿಗಳು. 'ಇನ್ನೂ ಒಂದು', 'ಒಂದು ಬದಿಯ ಕಡಲು' ನವ್ಯೋದಯ, ಸ್ವಲ್ಪ ಮಟ್ಟಿಗೆ ನವ್ಯ ಮಾರ್ಗಗಳನ್ನು ಅನುಸರಿಸಿ ಮಾನವತಾವಾದದ ತಾತ್ವಿಕ ನೆಲೆಗಳೊಂದಿಗೆ ವಾಸ್ತವವಾದದ ಸ್ವರೂಪವನ್ನು ಅನುಸರಿಸಿದ್ದರೆ, 'ಊರುಭಂಗ' ಮತ್ತು 'ಸಕೀನಾಳ ಮುತ್ತು' ಕಾದಂಬರಿಗಳಲ್ಲಿ ನವ್ಯ ಮಾರ್ಗಕ್ಕಿಂತ ಭಿನ್ನವಾದ ಮಾರ್ಗವನ್ನು ಅನುಸರಿಸಿದ್ದಾರೆ. ಕಾದಂಬರಿಯ ಕಥೆಯನ್ನು ಈ ಕೆಳಗಿನಂತೆ ಸಂಗ್ರಹಿಸಬಹುದು. ನಿರೂಪಕ, ಅವನ ಹೆಂಡತಿ ವಿಜಿ, ಅವರಿಬ್ಬರ ಮಗಳು ರೇಖಾ. ಇವರದು ಮಧ್ಯಮ ವರ್ಗಕ್ಕೆ ಸೇರಿದ ನಗರದ ಒಂದು ಕುಟುಂಬ. ನಿರೂಪಕ ಮಲೆನಾಡಿನ ಒಂದು ಕುಗ್ರಾಮದಿಂದ ಬಂದು, ಒಂದು ಕಂಪನಿಯಲ್ಲಿ ಕೆಲಸಕ್ಕೆ ಸೇರಿಕೊಂಡವನು. ಅವನ ಹೆಂಡತಿ ಸಹ ನೌಕರಿ ಮಾಡುವವಳೇ. ನಿರೂಪಕನಿಗೆ ಮೇಲ್ವರ್ಗದವರ ಬಗೆಗಿನ ಆಕರ್ಷಣೆ. ಆದರೆ, ಮಗಳಿಗೆ ಆ ಬಗೆಯ ಆಕರ್ಷಣೆ ಇಲ್ಲ. ಅವಳು ಸ್ವತಂತ್ರ ಮನೋಭಾವ ಬೆಳೆಸಿಕೊಳ್ಳಲು ಪ್ರಯತ್ನಿಸುತ್ತಾಳೆ. ನಿರೂಪಕನ ಹೆಂಡತಿಯೂ ಸ್ವತಂತ್ರ ಮನೋಭಾವದವಳೇ. ಆದರೆ, ಆಚರಣೆ, ನಂಬಿಕೆಗಳು ಸ್ವತಂತ್ರವಾಗಲು ಬಿಡುವುದಿಲ್ಲ. ಮಗಳು ರೇಖಾ ಹಳ್ಳಿಗೆ ಹೋದಾಗ ಅಲ್ಲಿ ಕ್ರಾಂತಿಕಾರಿ ಪತ್ರಿಕೆಯ ಸುರೇಶ ಮತ್ತು ನಕ್ಸಲ್‌ವಾದಿಯಾಗಿರುವ ತನ್ನ ತಾಯಿಯ, ತಮ್ಮ ರಮಣನ ಗುಂಪಿಗೆ ಸೇರಿರಬಹುದೇ ಎಂಬ ಅನುಮಾನ ಬರುತ್ತದೆ. ಅನುಮಾನ ಪಡುವಂತಹ ಘಟನೆಗಳು ನಡೆದು ನಿರೂಪಕನ ಮನಸ್ಸು ಪ್ರಕ್ಷುಬ್ಧಗೊಳ್ಳುತ್ತದೆ.

'ಸಕೀನಾಳ ಮುತ್ತು' ಕಾದಂಬರಿ ನವ್ಯ ಮತ್ತು ವಾಸ್ತವವಾದಿ ಮಾರ್ಗಕ್ಕಿಂತ ಭಿನ್ನವಾದದ್ದು. ಈ ಕಾದಂಬರಿಯ ನಾಯಕ ಹಾಗೂ ನಿರೂಪಕನು ಸ್ವಗತಲಹರಿಯಲ್ಲಿ, ಅಲ್ಲಲ್ಲಿ ಇತರ ಪಾತ್ರಗಳ ಜೊತೆ ಸಂಭಾಷಿಸುವ ತಂತ್ರದ ಮೂಲಕ ಕಥನವನ್ನು ಹೆಣೆಯಲಾಗಿದೆ. ನಿರೂಪಕನೇ ಎಲ್ಲವನ್ನು ಗ್ರಹಿಸಿ ನಿರೂಪಣೆ ಮಾಡುತ್ತಾ ಸಾಂಸ್ಕೃತಿಕ ಸ್ವರೂಪವನ್ನು ದಾಖಲಿಸುವ ತಂತ್ರ ಇಲ್ಲಿದೆ. ನಗರ ಮತ್ತು ಗ್ರಾಮಗಳೆರಡರಲ್ಲಿಯೂ ಬದುಕಿದ ನಿರೂಪಕ ತಾನು ಕಂಡಿದ್ದನ್ನು ಅನುಭವಿಸಿದ್ದನ್ನು ನಮ್ಮೆದುರಿಗೆ ತೆರೆದಿಡುತ್ತಾ ಹೋಗುತ್ತಾನೆ. ಹಾಗೆ ತೆರೆದಿಡುವಾಗ ಅವನು ಸಾಹಿತ್ಯದ ಉದ್ದೇಶ–ಪ್ರಯೋಜನವನ್ನು, ಸಾಹಿತ್ಯವನ್ನು ಓದಬೇಕಾದ ಕ್ರಮವನ್ನು ಚಿಂತಿಸುತ್ತಾ ಹೋಗುತ್ತಾನೆ. ಸಾಹಿತ್ಯದ ಉದ್ದೇಶ, ಲೇಖಕ–ಓದುಗರ ಸಂಬಂಧದ ಬಗ್ಗೆ ಕೆಲವು ಮುಖ್ಯವಾದ ತಾತ್ವಿಕ ವಿಚಾರಗಳು ಬಂದು